# ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ (RTE)-2009

ಭಾರತದ ಸಂವಿಧಾನದ ಪ್ರಕಾರ ಶಿಕ್ಷಣ ಹೊಂದಿರುವುದು ಎಲ್ಲಾ ನಾಗರೀಕರ ಮೂಲಭೂತ ಹಕ್ಕು , ಇದನ್ನು ಗಮನದಲ್ಲಿಟ್ಟುಕೊಂಡೇ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ (RTE)-2009 ರನ್ನು ರೂಪಿಸಲಾಗಿದೆ. ಈ ಕಾಯ್ದೆಯು ಆರರಿಂದ ಹದಿನಾಲ್ಕು ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಉಚಿತ, ಕಡ್ಡಾಯ ಮತ್ತು ಸಮಾನ ಶಿಕ್ಷಣವನ್ನು ಖಾತರಿಗೊಳಿಸಿದೆ.

ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ (RTE)-ಹಕ್ಕು ಕಾಯ್ದೆಯು ನಮ್ಮ ಮಕ್ಕಳ ಭವಿಷ್ಯದ ಜೀವನಕ್ಕೆ ಕೊಂಡಿಯಾಗಿದೆ. ನಮ್ಮ ಕನಸಿನ ಆರೋಗ್ಯಕರ ಮತ್ತು ಆತ್ಮ ವಿಶ್ವಾಸಯುಕ್ತ ದೇಶದ ನಿರ್ಮಾಣ ಹಾಗೂ ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ನ್ಯಾಯ ತತ್ವವನ್ನು ಉತ್ತೇಜಿಸುವ ಮನಸ್ಸಿನಲ್ಲಿ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು (RTE)-ಕಾಯ್ದೆಯನ್ನು ತಪ್ಪದೇ ಅನುಷ್ಠಾನಗೊಳಿಸುವ ಸಂಕಲ್ಪ ಮಾಡಬೇಕು.

## ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ (RTE)-ಕಾಯ್ದೆಯಡಿಯಲ್ಲಿ ಮಕ್ಕಳ ಹಕ್ಕುಗಳು :

- ★ ಆರರಿಂದ ಹದಿನಾಲ್ಕು ವರ್ಷದೊಳಗಿನ ಎಲ್ಲಾ ಮಕ್ಕಳಿಗೆ (ಒಂದರಿಂದ ಎಂಟನೇ ತರಗತಿಯವರೆಗೆ) ಉಚಿತ ಮತ್ತು ಕಡ್ಡಾಯ ಎಲಿಮೆಂಟರಿ ಶಿಕ್ಷಣವು ಸುತ್ತಮುತ್ತಲಿನ ಶಾಲೆಗಳಲ್ಲಿ ಸಿಗುವಂತಿರಬೇಕು.
- ★ ಶಾಲೆಯನ್ನು ಬದಲಾಯಿಸುವ ಅಥವಾ ವರ್ಗಾವಣೆ ಹೊಂದುವ ಸಂದರ್ಭದಲ್ಲಿ ಮಗುವಿನ ಇಚ್ಛೆಗನುಗುಣವಾಗಿ ಉಚಿತವಾಗಿ ಪ್ರವೇಶ ಹೊಂದುವ ಹಕ್ಕನ್ನು ಹೊಂದಿದೆ.
- ★ ಶಾಲೆಯನ್ನು ಬಿಡುವ ಸಮಯದಲ್ಲಿ ಎಲ್ಲಾ ಮಕ್ಕಳಿಗೂ ವರ್ಗಾವಣೆ ಪ್ರಮಾಣ ಪತ್ರವನ್ನು ಪಡೆಯುವ ಹಕ್ಕಿದೆ. ಹಾಗಿದ್ದರೂ ಸಹ ಬೇರೆ ಶಾಲೆಗೆ ದಾಖಲಾಗುವ ಸಂದರ್ಭದಲ್ಲಿ ಮಗು ವರ್ಗಾವಣೆ ಪ್ರಮಾಣ ಪತ್ರವನ್ನು ಹಾಜರು ಪಡಿಸಲು ಸಾಧ್ಯವಾಗದ ಪಕ್ಷದಲ್ಲಿ ದಾಖಲಾತಿಯನ್ನು ನಿರಾಕರಿಸುವಂತಿಲ್ಲ.

★ ದಾಖಲಾತಿ ಸಮಯದಲ್ಲಿ ಜನನ ಪ್ರಮಾಣ ಪತ್ರ / ಇತರೆ ಯಾವುದೇ ವಯಸ್ಸಿನ ಪುರಾವೆಗಳನ್ನು ಹಾಜರು ಪಡಿಸಲಾಗದಿದ್ದ ಪಕ್ಷದಲ್ಲಿಯೂ ಸಹ ಮಗು ಶಾಲೆಗೆ ದಾಖಲಾಗುವ ಹಕ್ಕನ್ನು ಹೊಂದಿದೆ.

★ ಯಾವುದೇ ಮಗುವಿನಿಂದ ವರ್ಷದ ಯಾವುದೇ ಸಮಯದಲ್ಲಿ ಯಾವುದೇ ರೀತಿಯ ಶಿಲ್ಕು / ಫೀ / ದೇಣಿಗೆ / ಕ್ಯಾಪಿಟೇಷನ್ ಶುಲ್ಕವನ್ನು ವಸೂಲಿ ಮಾಡುವಂತಿಲ್ಲ.

★ ಶಾಲೆಗೆ ದಾಖಲು ಮಾಡುವ ಸಂದರ್ಭದಲ್ಲಿ ಮಗು ಅಥವಾ ಪೋಷಕ / ತಂದೆ ತಾಯಿಯರನ್ನು ಯಾವುದೇ ರೀತಿಯ ಪ್ರವೇಶ ಪರೀಕ್ಷೆಯಂತಹ ವಿಧಾನಗಳಿಗೆ ಒಳಪಡಿಸುವ ಹಾಗಿಲ್ಲ.

★ ಮಗು ಶೈಕ್ಷಣಿಕ ವರ್ಷದ ಯಾವುದೇ ಸಮಯದಲ್ಲಿ ಶಾಲೆಗೆ ಪ್ರವೇಶವನ್ನು ಪಡೆಯಬಹುದು.

★ ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ಎಲ್ಲಾ ಮಕ್ಕಳ ಉಚಿತ ನೋಟ್ ಪುಸ್ತಕ, ಪಠ್ಯಪುಸ್ತಕ, ಬರೆಯುವ ಸಾಮಾಗ್ರಿ ಹಾಗೂ ಸಮವಸ್ತ್ರವನ್ನು ಪಡೆಯಲು ಅರ್ಹರಾಗಿರುತ್ತಾರೆ. ಅಂಗವಿಕಲ ಮಕ್ಕಳು ಅವರಿಗೆ ಅವಶ್ಯವಿರುವಂತಹ ವಿಶೇಷ ಕಲಿಕಾ ಸಾಮಗ್ರಿಗಳನ್ನು ಅವರು ಓದುವಂತಹ ಶಾಲೆಯಲ್ಲಿ ಪಡೆಯುವ ಹಕ್ಕನ್ನು ಹೊಂದಿರುತ್ತಾರೆ.

★ ಖಾಸಗಿ ಶಾಲೆಗಳಲ್ಲಿ ಒಟ್ಟು ಸೀಟುಗಳಲ್ಲಿ ಕನಿಷ್ಠ 25% ರಷ್ಟು ಸೀಟುಗಳನ್ನು ಆರ್ಥಿಕವಾಗಿ ಹಿಂದುಳಿದ ಮತ್ತು ಪ್ರತಿಕೂಲ ಪರಿಸ್ಥಿತಿಯಲ್ಲಿರುವ ಗುಂಪುಗಳ ಮಕ್ಕಳಿಗೆ ಮೀಸಲಿಡಬೇಕು. ಅನುದಾನ ಪಡೆಯುತ್ತಿರುವ ಶಾಲೆಗಳಲ್ಲಿ ಈ ಮಿಸಲಾತಿಯು ಸರ್ಕಾರ ಕಾಯ್ದಿರಿಸಿದ ಅನುದಾನ ಅಥವಾ ರಿಯಾಯಿತಿಯ ಪ್ರಮಾಣಕ್ಕೆ ಬದ್ಧ.

★ ಶಾಲೆಯಿಂದ ಹೊರಗುಳಿದ ಪ್ರತಿ ಮಗು ವಯಸ್ಸಿಗನುಗುಣವಾದ ತರಗತಿಗೆ ಪ್ರವೇಶ ಹೊಂದುವ ಮತ್ತು ವಿಶೇಷ ತರಬೇತಿಯ ಮೂಲಕ ತನ್ನ ಕಲಿಕಾ ಮಟ್ಟವನ್ನು ಹೆಚ್ಚಿಸಿಕೊಳ್ಳುವ ಹಕ್ಕುನ್ನು ಹೊಂದಿರುತ್ತದೆ.

★ ಲಿಂಗ, ಜಾತಿ, ಸಾಮಾಜಿಕ, ಸಾಂಸ್ಕೃತಿಕ ಅಥವಾ ಧರ್ಮದ ಆಧಾರದ ಮೇಲೆ ಮಕ್ಕಳನ್ನು ತಾರತಮ್ಯ ಮಾಡಬಾರದು.

★ ಭೀತಿ, ನೋವು, ಮಾನಸಿಕ ಕ್ಷೋಬೆಯಿಂದ ಮುಕ್ತವಾದ ಮತ್ತು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಸಹಾಯ ಮಾಡುವ ಪರಿಸರದಲ್ಲಿ ಮಕ್ಕಳಿಗೆ ಶಿಕ್ಷಣ ನೀಡಬೇಕು.

★ ಮಕ್ಕಳ ರಕ್ಷಣೆಯ ದೃಷ್ಟಿಯಿಂದ ಸರ್ವಋತು ಶಾಲಾ ಕಟ್ಟಡವನ್ನು ನಿರ್ಮಿಸುವುದು.

## ಶಾಲಾ ಮೇಲುಸ್ತುವಾರಿ / ನಿರ್ವಹಣ ಸಮಿತಿಗಳು (SMCs):

- ★ ಕನಿಷ್ಠ 75% ರಷ್ಟು ಪೋಷಕರನ್ನು ಮತ್ತು ಅದರಲ್ಲಿ 50% ರಷ್ಟು ಮಹಿಳೆಯರನ್ನು ಹೊಂದಿರುವ ಶಾಲಾ ಮೇಲುಸ್ತುವಾರಿ / ನಿರ್ವಹಣ ಸಮಿತಿಯನ್ನು ಪ್ರತಿ ಶಾಲೆ ಹೊಂದಿರಬೇಕು. ಶಾಲಾ ಮೇಲುಸ್ತುವಾರಿ ಸಮಿತಿಯ ಸದಸ್ಯರನ್ನು ಪ್ರಜಾಪ್ರಭುತ್ವದ ಮೌಲ್ಯಗಳಿಗನುಗುಣವಾಗಿ ಚುನಾವಣೆಯ ಮುಖಾಂತರ ಆಯ್ಕೆ ಮಾಡಬೇಕು.
- ★ ಶಾಲೆ ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷರು ಪೋಷಕರೇ ಆಗಿರಬೇಕು.
- ★ ಶಾಲೆಯ ಪ್ರಮುಖ ಕೆಲಸ ಕಾರ್ಯಗಳಾದಂತಹ ಶಾಲಾಭಿವೃದ್ಧಿಗೆ ಬಂದಿರುವ ಹಣ ಸಹಾಯ ದೇಣಿಗೆ ಮುಂತಾದವುಗಳ ಬಳಕೆ ಹಾಗೂ ಶಿಕ್ಷಕರ ಪಾರದರ್ಶಕತೆ ಮತ್ತು ಶಾಲಾಭಿವೃದ್ಧಿ ಯೋಜನೆ ತಯಾರಿಸುವಲ್ಲಿ ಉಸ್ತುವಾರಿ ಮಾಡುವುದು ಶಾಲಾ ಮೇಲುಸ್ತುವಾರಿ ಸಮಿತಿಯ ಪ್ರಮುಖ ಕಾರ್ಯಗಳು.
- ★ ಸಮಿತಿಯು ತಿಂಗಳಿಗೊಮ್ಮೆ ಸಭೆ ಸೇರಬೇಕು.

## ಕೇಂದ್ರ ಮತ್ತು ರಾಜ್ಯ ಹಾಗೂ ಸ್ಥಳೀಯ ಸರ್ಕಾರಗಳ ಕರ್ತವ್ಯಗಳು

- ★ ರಾಜ್ಯ ಪ್ರತಿ ಮಗುವಿಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವುದು.
- ★ ಮಗುವನ್ನು ಕಡ್ಡಾಯವಾಗಿ ದಾಖಲಾತಿ ಮಾಡಿಸುವುದು. ಹಾಜರಾತಿ ಮತ್ತು ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸಿ 14 ವರ್ಷದೊಳಗಿನ ಎಲ್ಲ ಮಕ್ಕಳ ದಾಖಲಾತಿ ಇಡುವುದು.
- ★ ಮಕ್ಕಳಿಗೆ ಅವಶ್ಯವಾದ ವಿಶೇಷ ತರಬೇತಿ ನೀಡಲು ಸೂಕ್ತ ವ್ಯವಸ್ಥೆ ಮಾಡುವದು.
- ★ ದುರ್ಬಲ ವರ್ಗದ ಮಕ್ಕಳು, ಅವಕಾಶವಂಚಿತ ಗುಂಪಿನ ಮಕ್ಕಳು ತಾರತಮ್ಯಕ್ಕೊಳಗಾಗದಂತೆ ಮತ್ತು ಅವರು ತಮ್ಮ ಮೂಲಭೂತ ಶಿಕ್ಷಣವನ್ನು ಪೂರ್ಣಗೊಳಿಸಲು ಸೂಕ್ತ ಪರಿಸರ ನಿರ್ಮಿಸುವುದು.
- ★ ಶಿಕ್ಷಣವನ್ನು ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತರಲು ಮೂಲ ಅವಶ್ಯಕತೆಗಳಾದ ಶಾಲಾ ಕಟ್ಟಡ, ನುರಿತ ಬೋಧಕವರ್ಗ ಮತ್ತು ಕಲಿಕಾ ಸಾಮಗ್ರಿಗಳನ್ನು ಪೂರೈಸುವುದು.
- ★ ವಲಸೆಗಾರರ ಮಕ್ಕಳ ಹಾಜರಾತಿಯನ್ನು ಖಾತರಿಗೊಳಿಸುವುದು, ಶಾಲೆಗಳು ತಮ್ಮ ನಾಯಕತ್ವ ಮತ್ತು ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುವಂತೆ ವ್ಯವಸ್ಥೆ ಮಾಡುವುದು ಹಾಗೂ ಶೈಕ್ಷಣಿಕ ವರ್ಷವನ್ನು ನಿರ್ಧಾರ ಮಾಡುವುದು.

## ಪೋಷಕರು ಮತ್ತು ತಂದೆ-ತಾಯಿಗಳ ಕರ್ತವ್ಯಗಳು :

★ ಮೂಲಭೂತ ಶಿಕ್ಷಣಕ್ಕಾಗಿ ತಮ್ಮ ಮಕ್ಕಳನ್ನು ನೆರೆಹೊರೆಯ / ತಮ್ಮ ಮನೆಯ ಹತ್ತಿರವಿರುವ ಶಾಲೆಗೆ ಸೇರಿಸುವುದು ಎಲ್ಲ ತಂದೆ- ತಾಯಿ ಮತ್ತು ಪೋಷಕರ ಜವಾಬ್ದಾರಿ.

## ಶಾಲೆಗಳ ಜವಾಬ್ದಾರಿ :

★ ಎಲ್ಲ ಶಾಲೆಗಳು ಯುಕ್ತ ಸರ್ಕಾರ ಅಥವಾ ಸ್ಥಳೀಯ ಅಧಿಕಾರದ ನಿಯಂತ್ರಣದಲ್ಲಿರಬೇಕು ದಾಖಲಾದ ಎಲ್ಲ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಅನುಷ್ಠಾನಗೊಳಿಸಬೇಕು.

★ ಶಾಲೆಗಳು ಯಾವುದೇ ರೀತಿಯ ಫೀ, ದೇಣಿಗೆ ಮತ್ತು ಶುಲ್ಕಗಳನ್ನು ಮಕ್ಕಳಿಂದ ಪಡೆಯಬಾರದು.

★ ಮಗುವಿನ ವಯಸ್ಸಿಗೆ ಸಂಬಂಧಿಸಿದಂತೆ ಯಾವುದೆ ದಾಖಲಾತಿ ಇಲ್ಲ ಎಂದು ಮಗುವಿನ ದಾಖಲಾತಿ ತಪ್ಪಿಸಬಾರದು.

★ ಮಗು ಶಾಲೆಯ ಶೈಕ್ಷಣಿಕ ವರ್ಷದ ಆರಂಭದಲ್ಲಿ ಶಾಲೆಗೆ ದಾಖಲಾಗುವಂತೆ ನೋಡಿಕೊಳ್ಳುವುದು. ಒಂದು ವೇಳೆ ಶೈಕ್ಷಣಿಕ ವರ್ಷದ ನಂತರವೂ ಮಗು ದಾಖಲಾತಿಯನ್ನು ಅಪೇಕ್ಷಿಸಿದ್ದಲ್ಲಿ ಅದನ್ನು ನಿರಾಕರಿಸುವಂತಿಲ್ಲ.

★ ಶಾಲೆಗಳಲ್ಲಿ ದೈಹಿಕ ಹಿಂಸೆ ಮಾನಸಿಕ ಕಿರುಕುಳವನ್ನು ಸಂಪೂರ್ಣವಾಗಿ ನಿಷೇಧಿಸಿದೆ.

★ ಮೂಲಭೂತ ಶಿಕ್ಷಣ ಮುಗಿಯುವ ಮುಂಚೆ ಯಾವುದೇ ಮಂಡಳಿ ನಡೆಸುವ ಪರೀಕ್ಷೆಗೆ ಕೂರಿಸುವಂತಿಲ್ಲ ಮತ್ತು ಯಾವುದೇ ಕಾರಣಕ್ಕೂ ನಪಾಸು ಮಾಡುವಂತಿಲ್ಲ.

ಸರ್ಕಾರ ಅಥವಾ ಸ್ಥಳೀಯ ಸರ್ಕಾರಗಳಿಂದ ಯಾವುದೇ ರೀತಿಯಾದ ಅನುದಾನ ಪಡೆಯದ ಖಾಸಗೀ ಶಾಲೆಗಳಿಗೂ ಸಹ ಶೇಕಡ 25% ಸೀಟುಗಳನ್ನು ಆ ಸ್ಥಳದ ದುರ್ಬಲ ವರ್ಗ ಮತ್ತು ಅವಕಾಶ ವಂಚಿತ ಮಕ್ಕಳಿಗೆ ಮೀಸಲಿಡಬೇಕು.

## ಶಿಕ್ಷಕರ ಕರ್ತವ್ಯಗಳು :

★ ಶಿಕ್ಷಕರು ನಿಗದಿತ ಸಮಯಕ್ಕೆ ಮತ್ತು ವ್ಯವಸ್ಥಿತವಾಗಿ ಶಾಲೆಗೆ ಬರಬೇಕು.

★ ಪಠ್ಯ ವಿಷಯವನ್ನು ನಿಗದಿತ ಸಮಯದಲ್ಲಿ ನಿರ್ವಹಿಸಿ ಪೂರ್ಣಗೊಳಿಸಬೇಕು.

★ ಪ್ರತಿ ಮಗುವಿನ ಕಲಿಕಾ ಸಾಮರ್ಥ್ಯ ಮತ್ತು ಕಲಿಕಾ ಮಟ್ಟವನ್ನು ಗುರುತಿಸಬೇಕು ಮತ್ತು ಮಕ್ಕಳಿಗೆ ಅವಶ್ಯಕ ಮಾರ್ಗದರ್ಶನ ನೀಡಬೇಕು.

★ ಶಿಕ್ಷಕರು ಆಗಾಗ್ಗೆ ಪೋಷಕರ ಸಭೆಯನ್ನು ಕರೆದು ಅವರಿಗೆ ಮಕ್ಕಳ ಕಲಿಕಾ ಪ್ರಗತಿ. ಸಾಮರ್ಥ್ಯ ಮತ್ತು ಹಾಜರಾತಿ ಬಗ್ಗೆ ಮಾಹಿತಿ ನೀಡಬೇಕು.

★ ಶಿಕ್ಷಕರು ಖಾಸಗಿಯಾಗಿ ಯಾವುದೇ ಪಾಠಗಳನ್ನು ಮಾಡಬಾರದು, ಮತ್ತು ಖಾಸಗಿ ಮನೆ ಪಾಠ ಸಂಸ್ಥೆ ಹೊಂದಿರಬಾರದು.

★ ಶಿಕ್ಷಕರನ್ನು ಶೈಕ್ಷಣಿಕ ಉದ್ದೇಶಕ್ಕಲ್ಲದೆ ಬೇರೆ ಉದ್ದೇಶಗಳಿಗೆ ಬಳಕೆ ಮಾಡಬಾರದು. ಆದರೂ ಸಹ ಹತ್ತು ವರ್ಷಗಳಿಗೊಮ್ಮೆ ನಡೆಯುವ ಜನ ಗಣತಿ, ಪ್ರಕೃತಿ ವಿಪತ್ತುಗಳ ಪರಿಹಾರಕ್ಕೆ ಹಾಗೂ ಸ್ಥಳೀಯ ವಿಧಾನ ಸಭೆ , ಲೋಕಸಭೆ ಚುನಾವಣೆಗೆ ಶಿಕ್ಷಕರನ್ನು ಬಳಸಬಹುದು.

## ಶಿಕ್ಷಣ ಹಕ್ಕು ಕಾಯ್ದೆಯಡಿಯಲ್ಲಿ ಮಕ್ಕಳ ಹಕ್ಕುಗಳ ನಿರ್ವಹಣೆ

★ ಶಿಕ್ಷಣ ಹಕ್ಕು ಕಾಯ್ದೆಗೆ ಸಂಬಂಧಿಸಿದ ದೂರುಗಳನ್ನು ವಿಚಾರಣೆ ಮಾಡಲು ರಾಜ್ಯ ಮಟ್ಟದಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವನ್ನು ಪ್ರತಿ ರಾಜ್ಯದಲ್ಲಿ ಸ್ಥಾಪಿಸಬೇಕು.

★ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆಯ ಅನುಷ್ಠಾನದ ಉಸ್ತುವಾರಿ ಕಾರ್ಯವನ್ನು ನೋಡಿಕೊಳ್ಳುವುದು ರಾಷ್ಟ್ರೀಯ ಮಕ್ಕಳ ಹಕ್ಕುಗಳ ಸಂರಕ್ಷಣಾ ಆಯೋಗದ ಜವಾಬ್ದಾರಿಯಾಗಿರುತ್ತದೆ.

## ದೂರುಗಳ ವಿಲೇವಾರಿ :

★ ಶಿಕ್ಷಣ ಕಾಯ್ದೆಯಡಿ ಸೂಚಿಸಿರುವ ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ಯಾವುದೇ ರೀತಿಯ ದೂರುಗಳನ್ನು ಸ್ಥಳೀಯ ಸರ್ಕಾರಕ್ಕೆ ನೀಡಬಹುದು. ಸ್ವೀಕರಿಸಿದ ಎಲ್ಲಾ ದೂರುಗಳ ದಾಖಲೆಯನ್ನು ಸ್ಥಳೀಯ ಸರ್ಕಾರದ ಕಛೇರಿಯಲ್ಲಿ ಕಾಯ್ದಿಡಬೇಕು. ಮತ್ತು ಸ್ವೀಕರಿಸಿದ ಎಲ್ಲಾ ದೂರುಗಳಿಗೆ ರಶೀದಿಯನ್ನು ಕೊಡಬೇಕು.

★ ಸ್ವೀಕರಿಸಿದ ದೂರುಗಳನ್ನು ಸ್ಥಳೀಯ ಪ್ರಾಧಿಕಾರವು ಸಂಬಂಧಪಟ್ಟ ಎರಡೂ ವ್ಯಕ್ತಿಗಳಿಗೆ ಸ್ಪಷ್ಟನೆ ನೀಡಲು ಸಾಕಷ್ಟು ಅವಕಾಶವನ್ನು ನೀಡುವುದರೊಂದಿಗೆ ಮೂರು ತಿಂಗಳೊಳಗೆ ವಿಷಯವನ್ನು ತೀರ್ಮಾನಿಸಬೇಕು. ಸ್ಥಳೀಯ ಪ್ರಾಧಿಕಾರದ ತೀರ್ಮಾನದಿಂದ ಯಾವುದೇ ವ್ಯಕ್ತಿ ನೊಂದಿದ್ದಲ್ಲಿ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕೆ ಅಥವಾ ರಾಷ್ಟ್ರೀಯ ಆಯೋಗಕ್ಕೆ ಅಥವಾ ರಾಷ್ಟ್ರೀಯ ಮಕ್ಕಳ ಹಕ್ಕುಗಳ ಸಂರಕ್ಷಣಾ ಆಯೋಗಕ್ಕೆ ಮೇಲ್ಮನವಿ ಸಲ್ಲಿಸಬಹುದು.

ಭಾರತದಲ್ಲಿ ತಾಂಡವಾಡುತ್ತಿರುವ ಅನಕ್ಷರತೆಯನ್ನು ಸಂಪೂರ್ಣವಾಗಿ ತೊಡೆದುಹಾಕುವ ಉದ್ದೇಶವನ್ನು ಹೊಂದಿರುವ ಕಾನೂನುಗಳಲ್ಲಿ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯ್ದೆ (RTE)-2009 ಅತ್ಯಂತ ಪ್ರಮುಖವಾದದ್ದು, ಈ ಕಾಯ್ದೆಯ ಬಗ್ಗೆ ನಾಗರಿಕರಲ್ಲಿ ಅರಿವು ಮೂಡಿಸುವುದು ಮತ್ತು ಕಾಯ್ದೆಯನ್ನು ಸಂಪೂರ್ಣ ಅನುಷ್ಠಾನ ಮಾಡುವುದು ಕೇವಲ ನಮ್ಮ ಕರ್ತವ್ಯವಲ್ಲ, ಇದು ನಮ್ಮ ಮತ್ತು ನಮ್ಮ ಮಕ್ಕಳ ಹಕ್ಕು ಕೂಡ.